**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ.ಸಿ. ನಂ.2417/2025.**

ಪಿರ್ಯಾದುದಾರರುಃ- ಮಂಕಿ ಪೊಲೀಸ್ ಠಾಣೆ ,
ಮಂಕಿ,
ತಾಲೂಕುಃ- ಹೊನ್ನಾವರ (ಉ.ಕ.).

**- ವಿರುದ್ಧ -**

ಆರೋಪಿತರುಃ-

1. ಸಂಗೀತಾ ರೋಡ್ರಿಗಿಸ್ ಕೋಂ ಅಶ್ವಿನ್ ಡಿಸೋಜಾ,
ಪ್ರಾಯ ಸುಮಾರುಃ- 33 ವರ್ಷ,
ಉದ್ಯೋಗಃ ಮನೆಕೆಲಸ,
ಸಾಕೀನಃ- ಆನಗಳ್ಳಿ,
ತಾಲೂಕುಃ-ಕುಂದಾಪುರ, ಜಿಲ್ಲೆ. ಉಡುಪಿ.

2. ಅಶ್ವಿನ್ ತಂದೆ ಜೊಸೆಫ್ ಡಿಸೋಜಾ,
ಪ್ರಾಯ ಸುಮಾರುಃ- 34 ವರ್ಷ,
ಉದ್ಯೋಗಃ ಇಲೆಕ್ಟ್ರಿಕಲ್ ಕಂಟ್ರ್ಯಾಕ್ಟರ್,
ಸಾಕೀನಃ- ಆನಗಳ್ಳಿ,
ತಾಲೂಕುಃ-ಕುಂದಾಪುರ, ಜಿಲ್ಲೆ. ಉಡುಪಿ.

*****

## ದೋಷಾರೋಪಣೆ

ಶ್ರೀ ಅನಿಲ್ ಜೋನ್ ಸಿಕ್ವೇರಾ., ಬಿ.ಬಿ.ಎ.,ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸುತ್ತಿದ್ದೇನೆ.

ಮಂಕಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಮಂಕಿಯ ಗಣೇಶ ನಗರ ಹತ್ತಿರ ಹಾಯ್ದಿರುವ ಎನ್.ಎಚ್.-66 ರಸ್ತೆಯಲ್ಲಿ ದಿನಾಂಕಃ 01/09/2025 ರಂದು ಬೆಳಿಗ್ಗೆ 10.00 ಗಂಟೆ ಸುಮಾರಿಗೆ ಪಿರ್ಯಾದಿಯವರು ತಮ್ಮ ಕೆ.ಎಸ್.ಆರ್.ಟಿ.ಸಿ ಬಸ್ಸ ನಂ.ಕೆ.ಎ-31/ಎಫ್-1547 ನೇದನ್ನು ಚಲಾಯಿಸಿಕೊಂಡು ಬರುತ್ತಿರುವಾಗ ರಸ್ತೆಯ ಮೇಲೆ ಒಮ್ಮೆಲೆ ಹಸು ಅಡ್ಡ ಬಂದಿದ್ದರಿಂದ ತಮ್ಮ ಬಸ್ಸನ್ನು ರಸ್ತೆಯ ಎಡಬದಿಗೆ ತೆಗೆದುಕೊಂಡಿದ್ದು, ಆ ವೇಳೆ ಬಸ್ಸಿನ ಹಿಂಬದಿಯಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ನಿಮ್ಮ ಕಾರಿನಲ್ಲಿ ಬರುತ್ತಿದ್ದಾಗ, ಬಸ್ಸ ನ್ನು ಎಡಬದಿಗೆ ತೆಗೆದುಕೊಂಡಿದ್ದರಿಂದ, 1 ಮತ್ತು 2 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ, ಪಿರ್ಯಾದಿಯವರನ್ನು ಉದ್ದೇಶಿಸಿ ರೆಂಡೆ ಪುತಾ ನಿನಗೆ ಗಾಡಿ ಓಡಿಸೋಕೆ ಬರೋಲ್ವಾ ಅಂತಾ ಕೊಂಕಣಿ ಭಾಷೆಯಲ್ಲಿ ಅವಾಚ್ಯ ಶಬ್ದಗಳಿಂದ ಬೈದಿದ್ದು, ಅದರ ಮೂಲಕ ಪಿರ್ಯಾದಿಯವರಿಗೆ ಅವಮಾನ ಮಾಡಿ ಆ ಮೂಲಕ ಪಿರ್ಯಾದಿಗೆ ಉದ್ರೇಕವನ್ನುಂಟು ಮಾಡಿ, ಸಾರ್ವಜನಿಕ ಶಾಂತಿ ಭಂಗವನ್ನು ಉಂಟು ಮಾಡುವ ಉದ್ದೇಶದಿಂದ ಅವರಿಗೆ ಅವಮಾನ ಮಾಡಿರುತ್ತೀರಿ, ಈ ಮೂಲಕ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ. 352 ಸಹಿತ 3(5)** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ, ಪಿರ್ಯಾದಿಯವರು ಪ್ರಯಾಣಿಕರನ್ನು ಇಳಿಸುತ್ತಿರುವ ವೇಳೆ ಆರೋಪಿತರಾದ ನೀವು ನಿಮ್ಮ ಕಾರಿನಲ್ಲಿ ಬಸ್ ನಿಂತ ಸ್ಥಳಕ್ಕೆ ಬಂದು ಸರ್ಕಾರಿ ಕರ್ತವ್ಯದಲ್ಲಿದ್ದ ಪಿರ್ಯಾದಿಯವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿ ಅವರ ಕರ್ತವ್ಯವನ್ನು ನಿರ್ವಹಿಸಲು ಅಡ್ಡಿಪಡಿಸಿದ್ದು, ಈ ಮೂಲಕ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ. 132 ಸಹಿತ 3(5)ರ** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ, 1 ನೇ ಆರೋಪಿಯಾದ ನೀವು ನಿಮ್ಮ ಬಲಕಾಲಿಗೆ ಹಾಕಿಕೊಂಡ ಚಪ್ಪಲಿಯನ್ನು ತೆಗೆದು ಬಸ್ಸಿನ ಡ್ರೈವರ್ ಸೀಟ್ ಮೇಲೆ ಚಾಲಕನ ಕರ್ತವ್ಯದಲ್ಲಿ ಕುಳಿತ ಪಿರ್ಯಾದಿಯ ಬಲತೋಳಿಗೆ ಚಪ್ಪಲಿಯಿಂದ ಮೂರು ಬಾರಿ ಹೊಡೆದು ಹಲ್ಲೆ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ. 133 ಸಹಿತ 3(5)ರ** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1  : ಈಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೆ?

1 ಮತ್ತು 2 ನೇ ಆರೋಪಿತರ ಉತ್ತರ: ತಿಳಿಯಿತು

ಪ್ರಶ್ನೆ 2 :  ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

1 ಮತ್ತು 2 ನೇ ಆರೋಪಿತರ ಉತ್ತರ: ವಿಚಾರಣೆಯಾಗಬೇಕು

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿತರು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ)

**ಸಹಿ ಇದೆ/-**

**ದಿನಾಂಕಃ-** 07-03-2026.

**(ಅನಿಲ್ ಜೋನ್ ಸಿಕ್ವೇರಾ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ನ್ಯಾಯಾಲಯ, ಹೊನ್ನಾವರ.**

*****

1 ನೇ ಆರೋಪಿಯ ಸಹಿಃ ಸಹಿ ಇದೆ

2 ನೇ ಆರೋಪಿಯ ಸಹಿಃ ಸಹಿ ಇದೆ